# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

## ಪಿ & ಎಸ್.ಸಿ ಸಂಖ್ಯೆ: 10/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಎಂ.ಜಿ ಸಬಾಸ್ಟಿನ್** | **PW – 3** |
| ತಂದೆಯ ಹೆಸರು | : | **ಲೇಟ್ ಜಾರ್ಜ್** | |
| ವಯಸ್ಸು | : | **65 ವರ್ಷ** | |
| ವೃತ್ತಿ | : | **ವ್ಯವಸಾಯ** | |
| ವಾಸ | : | **ಮರಡಿಯೂರು ಗ್ರಾಮ ಕೊಪ್ಪದ ಪಕ್ಕದ ಗ್ರಾಮ, ಪಿರಿಯಾಪಟ್ಟಣ ತಾಲೂಕು** | |

**ಸಾಕ್ಷಿಯನ್ನು ದಿನಾಂಕ 25-03-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು- ಎದುರುದಾರರ ಪರ ವಕೀಲರಾದ ಶ್ರೀ ಸಿ.ಎಸ್.ಪಿ. ರವರಿಂದಃ**

1. ಮೃತ ಕುಂಜ್ಞಪ್ಪನ್ ಇವರು ನನಗೆ ಸಂಬಂಧಿಕರಾಗುವುದಿಲ್ಲ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಮಧ್ಯೆ ಮತ್ತು ಮೃತ ಕುಂಜ್ಞಪ್ಪನ್ ರವರ ಮಧ್ಯೆ ಯಾವುದೇ ವ್ಯವಹಾರಗಳು ಇರಲಿಲ್ಲ. ನಾನು ಮತ್ತು ಮೃತ ಕುಂಜ್ಞಪ್ಪನ್ ರವರು ಬೇರೆ ಬೇರೆ ಜಾತಿಯವರು ಇರುತ್ತೇವೆ. ಮೃತ ಕುಂಜ್ಞಪ್ಪನ್ ರವರು ನಮ್ಮ ಊರಿನವರು ಇರುವುದಿಲ್ಲ. ಮೃತ ಕುಂಜ್ಞಪ್ಪನ್ ರವರು ಈ ವಿಲ್ ನಲ್ಲಿ ತೋರಿಸಿದ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ.

2. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ಸಮಯಕ್ಕೆ ಸಾಕ್ಷಿಯನ್ನು ತನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ತೋರಿಸಿ ಸದರಿ

ಪ್ರಮಾಣಪತ್ರದಲ್ಲಿ ಬರೆದ ವಿಚಾರಗಳನ್ನು ಯಾರು ಬರೆಯಲು ಮಾಹಿತಿ ಕೊಟ್ಟಿದ್ದರು ಎಂದು ಕೇಳಿದಕ್ಕೆ ಸಾಕ್ಷಿ ನಾನು ಬರೆಯಲು ಮಾಹಿತಿ ಕೊಟ್ಟಿಲ್ಲ ಎಂದು ಹೇಳುತ್ತಾರೆ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ಮುಖ್ಯ ವಿಚಾರಣೆಯ ಪ್ರಮಾಣಪತ್ರ ಸಾಕ್ಷಿಗೆ ತೋರಿಸಿ ಅದರಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿಲ್ಲ ಎಂದು ಕೇಳಿದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ನಿಪಿ–1 ಸಾಕ್ಷಿಗೆ ತೋರಿಸಿ ನೀವು ಇದರ ಮೇಲೆ ಎಲ್ಲಿ ಸಹಿ ಮಾಡಿದ್ದೀರಿ ಎಂದು ಕೇಳಿದಕ್ಕೆ ಸಾಕ್ಷಿ Sub registrar office ನಲ್ಲಿ ಅಂದಾಜು ಮಧ್ಯಾಹ್ನ 12.30 ಗಂಟೆಗೆ ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಿಪಿ–1 ರ ಮೇಲೆ ನೀವು ಯಾವ ವರ್ಷ ತಿಂಗಳು ದಿನಾಂಕದಂದು ಸಹಿ ಮಾಡಿದ್ದೀರಿ ಎಂದು ಕೇಳಿದಕ್ಕೆ ಸಾಕ್ಷಿ 23 ವರ್ಷದ ಹಿಂದೆ Sub registrar office ನಲ್ಲಿ ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಿಪಿ–1 ಸೋಮವಾರಪೇಟೆಯ Sub registrar office ಯಲ್ಲಿ ದಸ್ತವೇಜು ಬರಹಗಾರರಾದ ರಾಧಾಕೃಷ್ಣ ರವರು ತಯಾಸಿರುತ್ತಾರೆ.

3. ನಿಪಿ–1 ತಯಾರಿಸುವಾಗ ಮೃತ ಕುಂಜ್ಞಪ್ಪನ್ ರವರ ಜೊತೆ ಅವರ ಮಕ್ಕಳು ಇದ್ದರು. ನಿಪಿ–1 ಬರೆಯಲು ಮೃತ ಕುಂಜ್ಞಪ್ಪನ್ ರವರು ಮಾಹಿತಿ ಕೊಟ್ಟಿರುತ್ತಾರೆ. ಆ ಸಮಯದಲ್ಲಿ ಮೃತ ಕುಂಜ್ಞಪ್ಪನ್ ರವರ ಹೆಣ್ಣು ಮಕ್ಕಳು ಅವರ ಜೊತೆ ಇದ್ದರು. ನಿಪಿ–1 ಆರು ಪೇಜಿನ ದಾಖಲೆ ಇರುತ್ತದೆ. ಮೃತ ಕುಂಜ್ಞಪ್ಪನ್ ರವರು 6 ಪೇಜಿನಲ್ಲೂ ಸಹಿ ಮಾಡಿರುತ್ತಾರೆ. ನಿಪಿ–1 ಕನ್ನಡ ಭಾಷೆಯಲ್ಲಿ ಇರುತ್ತದೆ. ನಿಪಿ–1 ಕ್ಕೆ ಪ್ರಥಮವಾಗಿ ರಾಜಣ್ಣ ಸಹಿ ಮಾಡಿರುತ್ತಾರೆ. ನಿಪಿ–1 ಕ್ಕೆ ಎರಡನೆಯದಾಗಿ ನಾನು ಸಹಿ ಮಾಡಿರುತ್ತೇನೆ. ರಾಜಣ್ಣನವರು ಸಹಿ ಮಾಡಿದ ಅರ್ಧ ಗಂಟೆಯಲ್ಲಿ ನಾನು ಸಹಿ ಮಾಡಿರುತ್ತೇನೆ. ರಾಜಣ್ಣನವರು ಸಹಿ ಮಾಡಿದ ನಂತರ ನಾನು ಓದಿ ಸಹಿ ಮಾಡಿರುತ್ತೇನೆ. ನಾನು ನಿಪಿ–1 ರ ಮೇಲೆ ಸಹಿ ಮಾಡಿದನ್ನು ರಾಜಣ್ಣ ನೋಡಿರುತ್ತಾರೆ. ಮೃತ ಕುಂಜ್ಞಪ್ಪನ್ ನವರು ನಿಪಿ–1 ರ ಮೇಲೆ ಸಹಿ ಮಾಡಿದ 10

ನಿಮಿಷದ ನಂತರ ರಾಜಣ್ಣ ಸಹಿ ಮಾಡಿರುತ್ತಾರೆ. ಮೃತ ಕುಂಜ್ಞಪ್ಪನ್ ರವರು ನಿಪಿ–1 ರ ಮೇಲೆ ಸಹಿ ಮಾಡುವಾಗ ಆತನ ಹೆಣ್ಣು ಮಕ್ಕಳು ಆತನ ಜೊತೆಯಲ್ಲಿ ಇದ್ದರು. ನಾನು ಮೃತ ಕುಂಜ್ಞಪ್ಪನ್ ರವರು ನಿಪಿ–1 ರ ಮೇಲೆ ಸಹಿ ಮಾಡುವುದನ್ನು ನೋಡಿಲ್ಲ ಎಂದರೆ ಸರಿಯಲ್ಲ. ನಾನು ಮೃತ ಕುಂಜ್ಞಪ್ಪನ್ ರವರ ಜೊತೆ 23 ವರ್ಷದ ಹಿಂದೆ Sub registrar office ಗೆ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಿಪಿ–1 ನನ್ನ ಸಮಕ್ಷಮ ತಯಾರಿಸಿಲ್ಲ ಎಂದರೆ ಸರಿಯಲ್ಲ. ಮೃತ ಕುಂಜ್ಞಪ್ಪನ್ ರವರು ಕುಳಿತ ಜಾಗದಿಂದ ನಾನು 5 ಅಡಿ ಅಂತರದಲ್ಲಿ ಕುಳಿತಿದ್ದೆನು. ನಾನು ನಿಪಿ–1 ರ ಮೇಲೆ ಸಹಿ ಮಾಡುವುದನ್ನು ಮೃತ ಕುಂಜ್ಞಪ್ಪನ್ ರವರು ನೋಡಿಲ್ಲ ಎಂದರೆ ಸರಿಯಲ್ಲ. ಮೃತ ಕುಂಜ್ಞಪ್ಪನ್ ರವರು ಅನಾರೋಗ್ಯದಿಂದ ಇದ್ದರು ಎಂದರೆ ಸರಿಯಲ್ಲ. ನಾನು Sub registrar office ಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಮೃತ ಕುಂಜ್ಞಪ್ಪನ್ ರವರು Sub registrar office ಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರ ನನ್ನ ಸ್ನೇಹಿತನು ಎಂದರೆ ಸರಿ ಇದೆ. ನಾನು ಅರ್ಜಿದಾರನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೊಡಗು–ಮಡಿಕೇರಿ